ದಿನಾಂಕ : 18-08-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಇ ಕೆ ವಕೀಲರಿಂದಃ</u>

ನಾನು 9 ನೇ ತರಗತಿಯವರೆಗೆ ವ್ಯಾಸಾಂಗ ಮಾಡಿದ್ದೇನೆ .ಎಸ್ ಎಸ್ ಎಲ್ ಸಿ ಅನುತ್ತೀರ್ಣನಾಗಿದ್ದೇನೆ. ಪ್ರಸ್ತುತ ನಾನು ಹರಿವೇಸಂದ್ರ ಗ್ರಾಮದಲ್ಲಿ ವಾಸವಿದ್ದೇನೆ. ನಾವು ವಾಸಿಸುತ್ತಿರುವ ಮನೆ ಸರ್ವೆ ನಂ 154/3 ಬಿ ನಲ್ಲಿದೆ. ವಾದಿಗಳು ಗೊತ್ತು . 1 ನೇ ವಾದಿಯು ನನ್ನ ತಂದೆಯ ತಂಗಿ . 2 ಮತ್ತು 3 ನೇ ವಾದಿಗಳು 1 ನೇ ವಾದಿಯ ಮಕ್ಕಳು . ನಮ್ಮ ಕುಟುಂಬದ ಸ್ವತ್ತುಗಳಲ್ಲಿ 1 ನೇ ವಾದಿಗೆ ಯಾವುದೇ ಭಾಗಾಂಶ ನೀಡಿಲ್ಲ. ಯಾವ ಕಾರಣಕ್ಕೆ ಭಾಗಾಂಶ ನೀಡಿಲ್ಲ ಎಂದರೆ ನನ್ನ ತಂದೆಯ ಸ್ವತ್ತುಗಳಲ್ಲಿ ವ್ಯವಸಾಯ ಮಾಡುತ್ತಿದ್ದರು, ಈಗ ನಾವು ಅದನ್ನು ಮುಂದುವರೆಸಿದ್ದೇನೆ ಎಂದು ಸಾಕ್ಷಿಯು ತಿಳಿಸಿದ್ದಾರೆ . ದಾವಾ ಸರ್ವೆ ನಂ 154/3 ಬಿ ರಲ್ಲಿ ನೀವು ಎಷ್ಟು ಎಕರೆ ಸ್ವತ್ತು ಖರೀದಿಸಿದ್ದೀರಿ ಎಂದರೆ ಸಾಕ್ಷಿಯು 3 ಎಕರೆ 17 ಗುಂಟೆ ಸ್ವತ್ತನ್ನು ಖರೀದಿಸಿದ್ದೇನೆ, ಆ ಸ್ವತ್ತಿಗೂ ದಾವಾ ಸ್ವತ್ತಿಗೂ ಸಂಬಂಧ ಇಲ್ಲ . ಸದರಿ 3 ಎಕರೆ 17 ಗುಂಟೆ ಸ್ವತ್ತನ್ನು ರಂಗಶಾಮಯ್ಯ ರವರಿಂದ 1973 ನೇ ಸಾಲಿನಲ್ಲಿ ಖರೀದಿಸಿದ್ದೇನೆ. ಸದರಿ ಸ್ವತ್ತಿಗೆ ಸಂಬಂಧಸಿ ನೀವು ಖಾತೆ ಮಾಡಿಸಿಕೊಂಡಿದ್ದೀರಾ ಎಂದರೆ ನನ್ನ ತಂದೆ ಗಂಗಯ್ಯ ರವರು ಮಾಡಿಸಿಕೊಂಡಿದ್ದಾರೆ .

1 ನೇ ವಾದಿಯ ಮಾವ ಸೀಬನಯ್ಯ ನವರು ಸರ್ವೆ ನಂ 154/3 ಬಿ ರಲ್ಲಿ 2 ಎಕರೆ ಸ್ವತ್ತನ್ನು ಖರೀದಿಸಿದ್ದರು . ಅವರು ಸ್ವತ್ತನ್ನು ಖರೀದಿಸಿದ ವಿಚಾರ ನನ್ನ ಗಮನದಲ್ಲಿ ಇತ್ತು ಎಂದರೆ ಸರಿ . ಸದರಿ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಎಂದು ಹೇಗೆ ಹೇಳುತ್ತೀರಿ ಎಂದರೆ ಸಾಕ್ಷಿಯು ನನ್ನ ತಂದೆ ಹಾಗೂ ಸೀಬನಯ್ಯ ರವರು ಎಲ್ಲರೂ ಒಂದೇ ಕುಟುಂಬದಲ್ಲಿ ವಾಸವಿದ್ದರು , ಆದುದರಿಂದ ಹೇಳುತ್ತಿದ್ದೇನೆ ಎಂದು ತಿಳಿಸಿದ್ದಾರೆ . ಆ ರೀತಿ ಒಟ್ಟು ಕುಟುಂಬ ಎಂದು ತೋರಿಸಲು ವಂಶವೃಕ್ಷ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ . ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ವಕೀಲರ ಬಳಿ ನೀಡಿದ್ದೇನೆ ಎಂದು ತಿಳಿಸಿದ್ದಾರೆ . ಒಟ್ಟು ಕುಟುಂಬದ ಸ್ವತ್ತು ಎಂಬುದನ್ನು ಸಾಬೀತುಪಡಿಸಲು ವಂಶವೃಕ್ಷ ಹಾಜರುಪಡಿಸಬೇಕು ಎಂದರೆ ಸರಿ . ಒಟ್ಟು ಕುಟುಂಬದಲ್ಲಿ ನಾವೆಲ್ಲರೂ ಅನ್ಯೋನ್ಯವಾಗಿದ್ದೆವು . ಮುಖ್ಯ ವಿಚಾರಣೆ ಪ್ರಮಾಣದ 6 ನೇ ವಾಕ್ಯ ವೃಂದದಲ್ಲಿ 1953 ನೇ ಸಾಲಿನಲ್ಲಿ ಒಟ್ಟು ಕುಟುಂಬದಲ್ಲಿದ್ದಾಗ ಸ್ವತ್ತು ಖರೀದಿಸಲಾಗಿದೆ ಎಂದು ತಿಳಿಸಲಾಗಿದ್ದು ಗಂಗಮಾಳಮ್ಮ ರವರು ಹಣ ನೀಡಿ ಸ್ವತ್ತನ್ನು ಖರೀದಿಸಿದ್ದರು , ಆದುದರಿಂದ ಆ ರೀತಿ ತಿಳಿಸಿದ್ದೇನೆ .

ಗಂಗಮಾಳಮ್ಮ ವಿವಾಹ ಯಾವ ದಿನಾಂಕದಂದು ನಡೆದಿದೆ ಎಂದು ಗೊತ್ತಿಲ್ಲ . 1953 ರ ನಂತರ ಗಂಗಾಮಾಳಮ್ಮ ರವರ ವಿವಾಹ ನಡೆದಿದೆ ಎಂದರೆ ಗೊತ್ತಿಲ್ಲ . ಸರ್ವೆ ನಂ . 154/3 ಬಿ ಸ್ವತ್ತು ಪ್ರಸ್ತುತ ನನ್ನ ಹೆಸರಿಗೆ ಬರುತ್ತಿದೆ . ಸದರಿ ಸ್ವತ್ತು ನಿಮ್ಮ ಹೆಸರಿಗೆ ಹೇಗೆ ಬಂತು ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿನಲ್ಲಿತ್ತು ಅವರು ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದಾರೆ ಆ ಮೂಲಕ ನನ್ನ ಹೆಸರಿಗೆ ಖಾತೆಯಾಗಿದೆ ಎಂದು ತಿಳಿಸಿದ್ದಾರೆ . ಸೀಬನಯ್ಯ ರವರು ದಾವಾ ಸರ್ವೆ ನಂಬರ್ 2 ಎಕರೆ ಸ್ವತ್ತಿಗೆ ಸಂಬಂಧಿಸಿ ನಮಗೆ ಯಾವುದೇ ದಾಖಲೆ ಮಾಡಿಕೊಟ್ಟಿಲ್ಲ , ಒಟ್ಟು ಕುಟುಂಬದ ಸ್ವತ್ತಾಗಿದ್ದ ಕಾರಣ ನನ್ನ ಹೆಸರಿಗೆ ಖಾತೆಯಾಗಿದೆ . ಸೀಬನಯ್ಯ ನವರು ಒಟ್ಟು ಕುಟುಂಬದಲ್ಲಿದ್ದಾಗ ಸದರಿ ಎಕರೆ 2 ಎಕರೆ ಸ್ವತ್ತನ್ನು ಖರೀದಿಸಿದ್ದರು ಎಂದು ತೋರಿಸಲು ಏನು ದಾಖಲೆ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿಯು ಸೀಬನಯ್ಯ ರವರ ಮಗ ನರಸಿಂಹಯ್ಯ ರವರು ಸಹಿ ಮಾಡಿರುವ ಪಾಲು ಪಾರಿಕತ್ ನ್ನು ಹಾಜರುಪಡಿಸಿದ್ದೇನ ಎಂದು ತಿಳಿಸಿದ್ದಾರೆ . ನರಸಿಂಹಯ್ಯ ರವರಿಗೆ ಸಹಿ ಮಾಡಲು ಬರುತ್ತಿರಲಿಲ್ಲ , ನಿಡಿ -27 ರಲ್ಲಿ ಅವರ ಸಹಿಯನ್ನು ನಕಲು ಮಾಡಲಾಗಿದೆ ಎಂದರೆ ಸರಿಯಲ್ಲ . ಅವರ ಸಹಿಯನ್ನು ನಕಲು ಮಾಡಿ ಪಂಚಾಯಿತಿ ಪಾರಿಕತ್ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ . ನಿಡಿ -27 ನೋಂದಾಯಿತ ದಾಖಲೆಯೋ ಅಲ್ಲವೋ ನನಗೆ ಗೊತ್ತಿಲ್ಲ . ಸೀಬನಯ್ಯ ರವರ ಹೆಸರಿನಲ್ಲಿದ್ದ ಸ್ವತ್ತಿನ ಸಂಬಂಧ ಅವರ ಹೆಸರಿಗೆ ಮೂಲ ದಾಖಲೆ ಹೇಗೆ ಬಂತು ಎಂಬ ಕಾನೂನುಬದ್ಧ ದಾಖಲೆಗಳನ್ನು ಪರಿಶೀಲಿಸದೆ ನಿಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿನಲ್ಲಿತ್ತು ನನ್ನ ಹೆಸರಿಗೆ ಮಾಡಿಸಿಕೊಂಡಿದ್ದೇನೆ ಎಂದು ತಿಳಿಸಿದ್ದಾರೆ . ಸೀಬನಯ್ಯ ರವರ ಹೆಸರು ಕೈ ಬರವಣಿಗೆ ಪಹಣಿಯಲ್ಲಿ ಬರುತ್ತಿತ್ತು ಅದನ್ನು ತಿದ್ದುಪಡಿ ಮಾಡಿಸಿ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ . ಸೀಬನಯ್ಯ ಅಥವಾ ನರಸಿಂಹಯ್ಯ ನಿಮ್ಮ ಹೆಸರಿಗೆ 2 ಎಕರೆ ಸ್ವತ್ತಿಗೆ ದಾಖಲೆಗಳನ್ನು ಬರೆದುಕೊಟ್ಟಿದ್ದಾರೆಯೇ ಎಂದರೆ ಸಾಕ್ಷಿಯು ಒಟ್ಟು ಕುಟಂಬದಲ್ಲಿದ್ದ ಕಾರಣ ಪಂಚಾಯಿತಿ ಪಾರಿಕತ್ ಮಾಡಿಕೊಟ್ಟಿದ್ದಾರೆ ಎಂದು ತಿಳಿಸಿದ್ದಾರೆ . ಯಾವುದೇ ಸ್ವತ್ತಿನ ಸಂಬಂಧ ಖಾತೆ ಮಾಡಿಸಿಕೊಳ್ಳಲು ಕಾನೂನುಬದ್ಧ ದಾಖಲೆಯ ಮೂಲಕ ಸ್ವತ್ತಿನ ಹಕ್ಕು ವರ್ಗಾವಣೆಯಾಗಬೇಕು ಎಂದರೆ ಸಾಕ್ಷಿಯು ಒಟ್ಟು ಕುಟುಂಬದಿಂದ ನೀಡಲಾದ ಪಾರಿಕತ್ ನ ಆಧಾರದಲ್ಲಿ ಖಾತೆ ಮಾಡಿಸಿಕೊಂಡಿದ್ದೇವೆ ಎಂದು ತಿಳಿಸಿದ್ದಾರೆ . ಸೀಬನಯ್ಯ ನವರು ಪಂಚಾಯಿತಿ ಪಾರಿಕತ್ ಗೆ ಸಹಿ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ . ನಿಡಿ -27 ಗಂಗಪ್ಪ ಮತ್ತು ನಂಜಪ್ಪ ರವರ ನಡುವೆ ನಡೆದಿರುವ ಪಂಚಾಯಿತಿ ಪಾರಿಕತ್ ಆಗಿದೆ . ನರಸಿಂಹಯ್ಯ ರವರ ಸಹಿಯನ್ನು ನಕಲು ಮಾಡಿ ಅವರ ಕುಟುಂಬದವರ ಯಾರ ಸಹಿಯನ್ನು ಪಡೆಯದೇ 2 ಎಕರೆ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಪಂಚಾಯಿತಿ ಪಾರಿಕತ್ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ .

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

Sd/-
(ಅನುಪಮ.ಡಿ. )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .